# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 05.12.2018 ರಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ ಸಿಂಡಿಕೇಟಿನ ಏಳನೇ ಸಾಮಾನ್ಯ ಸಭೆಯ ನಡವಳಿಗಳು.**

**ಹಾಜರಿದ್ದ ಸದಸ್ಯರು:**

1. ಪ್ರೊ. ಜಿ.ಹೇಮಂತಕುಮಾರ್ – ಕುಲಪತಿಗಳು ಹಾಗೂ ಅಧ್ಯಕ್ಷರು
2. ಪ್ರೊ. ಆಯಿಷಾ ಎಂ.ಷರೀಫ್ – ಸದಸ್ಯರು
3. ಕು. ಸಹನಾ ಶಿವಪ್ಪ – ಸದಸ್ಯರು
4. ಪ್ರೊ. ಎಸ್.ಎಲ್. ಸುರೇಶ್ – ಸದಸ್ಯರು
5. ಡಾ. ರಾಜಗೋಪಾಲ್ – ಸದಸ್ಯರು
6. ಡಾ. ಎ.ಟಿ.ಶಿವರಾಮು – ಸದಸ್ಯರು
7. ಡಾ. ಎಂ.ಪ್ರೀತಿ – ಸದಸ್ಯರು
8. ಶ್ರೀ ಆರ್.ನಾಗರಾಜ (ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಅವರ ಪರವಾಗಿ) – ಸದಸ್ಯರು
9. ಪ್ರೊ. ಜೆ. ಸೋಮಶೇಖರ್ ಕುಲಸಚಿವ(ಪರೀಕ್ಷಾಂಗ) – ಸದಸ್ಯರು
10. ಪ್ರೊ. ಆರ್.ರಾಜಣ್ಣ – ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

**ಹಾಜರಾಗದ ಸದಸ್ಯರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಸಚಿವರು, ಸಿಂಡಿಕೇಟ್‌ನ ಏಳನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಖಾಯಂ ಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡು ಇದೇ ಮೊದಲ ಬಾರಿಗೆ ಸಿಂಡಿಕೇಟ್ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ಪ್ರೊ. ಜಿ.ಹೇಮಂತಕುಮಾರ್ ಇವರನ್ನು ಎಲ್ಲಾ ಸಿಂಡಿಕೇಟ್ ಸದಸ್ಯರುಗಳ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಮತ್ತು ಸದಸ್ಯರನ್ನು ಕುಲಪತಿಗಳಿಗೆ ಪರಿಚಯಿಸಿದರು.

ಇದುವರೆವಿಗೂ ಪ್ರಭಾರ ಕುಲಪತಿಗಳಾಗಿ ಸೇವೆ ಸಲ್ಲಿಸಿದ ಪ್ರೊ. ಆಯಿಷಾ ಎಂ.ಷರೀಫ್, ಡೀನರು, ವಾಣಿಜ್ಯಶಾಸ್ತ್ರ ನಿಕಾಯ, ಮಾನಸಗಂಗೋತ್ರಿ, ಮೈಸೂರು ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು. ಹಾಗೆಯೇ ಹಿರಿಯ ಡೀನರಾಗಿ ಮತ್ತೆ ಸಿಂಡಿಕೇಟ್‌ಗೆ ಸದಸ್ಯರಾಗಿ ಕುಲಪತಿಗಳಿಂದ

ನಾಮನಿರ್ದೇಶನಗೊಂಡು ಆಗಮಿಸಿರುವ ಪ್ರೊ. ಆಯಿಷಾ ಎಂ.ಷರೀಫ್ ಅವರನ್ನು ಸಿಂಡಿಕೇಟ್‌ನ ಪರವಾಗಿ ಸ್ವಾಗತಿಸಲಾಯಿತು.

ಕುಲಪತಿಗಳಾದ ಪ್ರೊ. ಜಿ.ಹೇಮಂತಕುಮಾರ್ ಅವರು ಮಾತನಾಡಿ ತಾವು ಕುಲಪತಿಗಳಾಗಿ ದಿನಾಂಕ 16-11-2018ರಂದು ಅಧಿಕಾರ ವಹಿಸಿಕೊಂಡಿದ್ದು ಪ್ರಥಮಬಾರಿಗೆ ಸಿಂಡಿಕೇಟ್ ಸಭೆಯ ಅಧ್ಯಕ್ಷತೆ ವಹಿಸುತ್ತಿರುವುದಾಗಿಯೂ ಮತ್ತು ಮೈಸೂರು ವಿಶ್ವವಿದ್ಯಾನಿಲಯವು ತನ್ನದೇ ಆದ ಹಿರಿಮೆ, ಇತಿಹಾಸವನ್ನು ಹೊಂದಿರುವುದರಿಂದ ಇದರ ಘನತೆಗೆ ತಕ್ಕ ರೀತಿಯಲ್ಲಿ ಉತ್ತಮ ನಿರ್ಧಾರಗಳನ್ನು ಕೈಗೊಳ್ಳಬೇಕಾದ ಕರ್ತವ್ಯ ವಿಶ್ವವಿದ್ಯಾನಿಲಯದ ಉನ್ನತ ಪ್ರಾಧಿಕಾರವಾದ ಸಿಂಡಿಕೇಟ್‌ನದ್ದಾಗಿದೆ. ಕುಲಪತಿಗಳಾಗಿ ತಪ್ಪು ನಿರ್ಧಾರ ಕೈಗೊಳ್ಳದಂತೆ ಸಕಾರಾತ್ಮಕವಾಗಿ ಯೋಚಿಸಿ ವಿಶ್ವವಿದ್ಯಾನಿಲಯಕ್ಕೆ ಒಳಿತಾಗುವ ರೀತಿಯಲ್ಲಿ ನಿರ್ಧಾರ ಕೈಗೊಂಡು ಆಡಳಿತ ನಡೆಸಲು ತಮ್ಮೆಲ್ಲರ ಸಹಕಾರ ಕೋರುವುದಾಗಿ ತಿಳಿಸಿದರು.

ನಂತರ ಮಾನ್ಯ ಕುಲಸಚಿವರು, ಕಾರ್ಯಸೂಚಿಯಂತೆ ಸಭೆಯಲ್ಲಿ ಮಂಡಿಸಲಾಗಿರುವ ವಿಷಯಗಳ ಬಗ್ಗೆ ವಿಷಯ ಮಂಡನೆ ಮಾಡಲು ಸಭೆಯ ಅನುಮತಿ ಕೋರಿದರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I | ದಿನಾಂಕ 16-11-2018ರಂದು ನಡೆದ ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ |
| | ಪ್ರೊ. ಜೆ. ಸೋಮಶೇಖರ್, ಕುಲಸಚಿವ(ಪರೀಕ್ಷಾಂಗ) ಅವರು ದಿನಾಂಕ 16-11-2018ರ 6ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ 11.6ರ ತೀರ್ಮಾನಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಯನ್ನು ವ್ಯಕ್ತಪಡಿಸುತ್ತಾ ಸಮಾಜ ಕಲ್ಯಾಣ ಇಲಾಖೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 76 ಬ್ಯಾಕ್‌ಲಾಗ್ ಹುದ್ದೆಗಳನ್ನು ಅಂತಿಮವಾಗಿ ಗುರುತಿಸಲಾಗಿರುವುದರಿಂದ ಅದನ್ನು ಪರಿಗಣಿಸಬೇಕೆ ಎಂಬುದರ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣ ಕೋರಬೇಕು ಎಂಬ ಅಂಶವನ್ನು ತೀರ್ಮಾನದಲ್ಲಿ ಸೇರ್ಪಡೆ ಮಾಡಬೇಕೆಂದರು.<br>ಪ್ರೊ. ಆರ್.ರಾಜಣ್ಣ ಅವರು ಸ್ಪಷ್ಟೀಕರಣ ನೀಡುತ್ತಾ ಈಗಾಗಲೇ 2001ರಲ್ಲಿ ಗುರುತಿಸಲಾಗಿದ್ದ 75 ಬ್ಯಾಕ್‌ಲಾಗ್ ಹುದ್ದೆಗಳಲ್ಲಿ 73 ಹುದ್ದೆಗಳನ್ನು ಭರ್ತಿಮಾಡಲಾಗಿದ್ದು 02 ಹುದ್ದೆಗಳು ಮಾತ್ರ ಅರ್ಹ ಅಭ್ಯರ್ಥಿಗಳು ಲಭ್ಯವಾಗದೇ ಇರುವುದರಿಂದ ಖಾಲಿ ಉಳಿದಿವೆ. ಹಾಗೂ 2016ರಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸುವಾಗ ರಂಗವಿಠಲಚಾರ್ ವರದಿಯ ಮೇಲೆ ಕ್ರಮಕೈಗೊಳ್ಳಬೇಕಾಗಿದ್ದರಿಂದ ಮತ್ತು 2006-07ರಲ್ಲಿ ನೇಮಕಾತಿಗಳ ವಿರುದ್ಧ ಪ್ರಕರಣ ನ್ಯಾಯಾಲಯದಲ್ಲಿದ್ದುದರಿಂದ ಭರ್ತಿಯಾಗದ ಎರಡು ಹುದ್ದೆಗಳನ್ನು ಒಳಗೊಂಡಂತೆ 2016ರಲ್ಲಿಯೂ ಸಹ 76 ಹುದ್ದೆಗಳನ್ನು ಗುರುತಿಸಲಾಗಿದ್ದರೂ |

| | |
|---|---|
| | 2006–07ರಲ್ಲಿ ನೇಮಕಗೊಂಡಿದ್ದ ಪರಿಶಿಷ್ಟಜಾತಿ & ಪರಿಶಿಷ್ಟ ಪಂಗಡಕ್ಕೆ ಸೇರಿದ 21 ಹುದ್ದೆಗಳನ್ನು ಕೈಬಿಟ್ಟು 55 ಹುದ್ದೆಗಳನ್ನು ಗುರುತಿಸಲಾಗಿತ್ತು. ಅದರಂತೆ ಈಗಾಗಲೇ ಪ್ರಕಟಣೆಯನ್ನು ಹೊರಡಿಸಲಾಗಿದೆ. ಆದರೆ 2018ರಲ್ಲಿ ಮತ್ತೊಮ್ಮೆ ಪರಿಶೀಲಿಸಿ ವರದಿ ನೀಡುವಾಗ 76 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿದೆ. 2006–07ರಲ್ಲಿ ಭರ್ತಿ ಮಾಡಲಾಗಿರುವ ಪರಿಶಿಷ್ಟಜಾತಿ & ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳನ್ನು (ಹುದ್ದೆಗಳನ್ನು) ಗಣನೆಗೆ ತೆಗೆದುಕೊಳ್ಳದಿರುವುದರಿಂದ ಈಗಾಗಲೇ 55 ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡಲು ಅನುಮತಿಕೋರಿ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.<br>ಮಾನ್ಯ ಕುಲಪತಿಗಳು ಮಾತನಾಡಿ 55 ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡಲು ಅನುಮತಿ ನೀಡುವಂತೆ ಪತ್ರ ಬರೆದಿರುವುದನ್ನು ಗಮನಿಸಿದ್ದೇನೆ. ಹಿಂದಿನ ಸಿಂಡಿಕೇಟ್‌ನಲ್ಲಿ ಸರ್ಕಾರದಿಂದ ಅನುಮತಿ ಬಂದ ನಂತರ ಸಿಂಡಿಕೇಟ್‌ಗೆ ಮರುಮಂಡಿಸುವಂತೆ ತೀರ್ಮಾನಿಸಲಾಗಿದೆ. ಆದ್ದರಿಂದ ಸಿಂಡಿಕೇಟ್‌ನ ಅನುಮೋದನೆ ಪಡೆದು ಪ್ರಕಟಣೆ ಹೊರಡಿಸುವ ಸಂದರ್ಭದಲ್ಲಿ ಚರ್ಚಿಸಿ ಗೊಂದಲವಿದ್ದಲ್ಲಿ ಸರ್ಕಾರದ ಸ್ಪಷ್ಟ ನಿರ್ದೇಶನಕೋರಿ ಆನಂತರ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಕ್ರಮಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು. |
| **ತೀರ್ಮಾನ** | ಮಾನ್ಯ ಕುಲಪತಿಗಳ ಭರವಸೆಯ ಮೇರೆಗೆ ದಿನಾಂಕ 16–11–2018ರಂದು ನಡೆದ ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು. |
| II | ದಿನಾಂಕ 16–11–2018ರಂದು ನಡೆದ ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| **ತೀರ್ಮಾನ** | ವರದಿಯನ್ನು ಗಮನಿಸಲಾಯಿತು. |
| 2018/12.1 | ಡಾ. ಎಂ. ಮೀರಾ, ಸಹಾಯಕ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, ಇವರು ಶ್ರೀಲಂಕಾ ದೇಶಕ್ಕೆ ಹೋಗಿ ಬಂದಿರುವ ಸಂಬಂಧ ಘಟನೋತ್ತರ ಮಂಜೂರಾತಿಯನ್ನು ನೀಡಿರುವ ಬಗ್ಗೆ – ಸ್ಥಿರೀಕರಣಕ್ಕಾಗಿ |
| **ತೀರ್ಮಾನ** | ಡಾ. ಎಂ. ಮೀರಾ, ಸಹಾಯಕ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, ಇವರು ಅವರ ಹಕ್ಕಿನಲ್ಲಿರುವ ರಜೆಯನ್ನು ಬಳಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ವಿಧವಾದ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ದಿನಾಂಕ 26.10.2018ರಿಂದ 30.10.2018ರವರೆಗೆ ಶ್ರೀಲಂಕಾ ದೇಶಕ್ಕೆ ವೈಯಕ್ತಿಕ ಭೇಟಿಯ ನಿಮಿತ್ತ ಹೋಗಿ ಬಂದಿರುವ ಸಂಬಂಧ ನೀಡಿರುವ ಘಟನೋತ್ತರ ಮಂಜೂರಾತಿಯನ್ನು ಸಿಂಡಿಕೇಟ್ ಸ್ಥಿರೀಕರಿಸಿತು. |
| 2018/12.2 | ಡಾ. ಕೆ. ಭೈರಪ್ಪ, ನಿವೃತ್ತ ಪ್ರಾಧ್ಯಾಪಕರು, ಭೂ ವಿಜ್ಞಾನ ಅಧ್ಯಯನ ವಿಭಾಗ, ಇವರನ್ನು ಯು.ಪಿ.ಇ. ಯೋಜನೆಯಲ್ಲಿ Visiting Professor ಆಗಿ ನೇಮಕ ಮಾಡಿಕೊಳ್ಳುವ ಬಗ್ಗೆ. |
| **ತೀರ್ಮಾನ** | ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಕಾರ್ಯನಿರ್ವಹಿಸಿ ಅವಧಿ ಮುಗಿದ ನಂತರ ಯು.ಪಿ.ಇ. ಯೋಜನೆಯ ನಿರ್ದಿಷ್ಟ ಸಂಶೋಧನಾ ಕ್ಷೇತ್ರ–1ರ ಯೋಜನೆಯಲ್ಲಿ ದಿನಾಂಕ 6–6–2018ರಿಂದ Visiting Scientist ಆಗಿ ಕಾರ್ಯನಿರ್ವಹಿಸುತ್ತಿರುವ ಡಾ. ಕೆ. ಭೈರಪ್ಪ, ನಿವೃತ್ತ ಪ್ರಾಧ್ಯಾಪಕರು, ಭೂ ವಿಜ್ಞಾನ ಅಧ್ಯಯನ ವಿಭಾಗ, ಇವರು ತಮ್ಮ ಹುದ್ದೆಯ ಪದನಾಮವನ್ನು Visiting |

| | |
|---|---|
| | Professor ಆಗಿ ಬದಲಾವಣೆಮಾಡಿ ಮರು ಆದೇಶ ನೀಡುವಂತೆ ಕೋರಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |
| 2018 /12.3 | ಡಾ. ಸೆಯಧದಿ ಮರಜ್ಯೈ, ಸಹಾಯಕ ಪ್ರಾಧ್ಯಾಪಕರು, ಉನ್ನತ ಶಿಕ್ಷಣ ಸಂಶೋಧನಾ ಮತ್ತು ಯೋಜನಾ ಸಂಸ್ಥೆ (IRPHE) ತೆಹ್ರಾನ್, ಇರಾನ್ ಇವರಿಗೆ ತಮ್ಮ ಸೆಬ್ಯಾಟಿಕಲ್ ರಜೆಯ ಅವಧಿಯಲ್ಲಿ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಂಶೋಧನೆ ಕೈಗೊಳ್ಳಲು ಅನುಮತಿ ನೀಡಿರುವ ಅವಧಿಯನ್ನು 06 ತಿಂಗಳು ವಿಸ್ತರಿಸುವ ಬಗ್ಗೆ. |
| **ತೀರ್ಮಾನ** | ಡಾ. ಸೆಯಧದಿ ಮರಜ್ಯೈ, ಸಹಾಯಕ ಪ್ರಾಧ್ಯಾಪಕರು, ಉನ್ನತ ಶಿಕ್ಷಣ ಸಂಶೋಧನಾ ಮತ್ತು ಯೋಜನಾ ಸಂಸ್ಥೆ (IRPHE) ತೆಹ್ರಾನ್, ಇರಾನ್ ಅವರು ತಮ್ಮ ಸೆಬ್ಯಾಟಿಕಲ್ ರಜೆಯ ಅವಧಿಯಲ್ಲಿ ಪ್ರೊ. ಯಶವಂತ ಡೋಂಗ್ರೆ ಅವರ ಮಾರ್ಗದರ್ಶನದಲ್ಲಿ, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ, ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಪೋಸ್ಟ್ ಡಾಕ್ಟರಲ್ ಸಂಶೋಧನೆಯನ್ನು 10-12-2018ರವರೆಗೆ ಕೈಗೊಳ್ಳಲು 3-8-2017ರಂದು ಸಿಂಡಿಕೇಟ್ ಸಭೆಯು ಅನುಮತಿಸಿದ್ದು ಹಾಗೂ ಮಾತೃ ಸಂಸ್ಥೆ (IRPHE) ತೆಹ್ರಾನ್‌ನಿಂದ ಅನುಮತಿ ಪಡೆದು ದಿನಾಂಕ 10-12-2018ರಿಂದ 06 ತಿಂಗಳ ಅವಧಿಗೆ ಮುಂದುವರೆಯಲು ಕೋರಿರುವ ಅವರ ಮನವಿಗೆ ಮಾರ್ಗದರ್ಶಕರು ಶಿಫಾರಸ್ಸು ಮಾಡಿರುವುದನ್ನು ಗಮನಿಸಿದ ಸಿಂಡಿಕೇಟ್ ದಿನಾಂಕ 10-12-2018ರಿಂದ 06 ತಿಂಗಳ ಅವಧಿಗೆ ಸಂಶೋಧನೆ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು. |
| 2018/12.4 | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಮತ್ತು ಮನಃಶಾಸ್ತ್ರ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಿಸುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ, ಪ್ರೊ. ಮಲ್ಲಿನಾಥ್ ಕಂಬಾರ್, ಪ್ರಾಧ್ಯಾಪಕರು ಇವರ ನಂತರ ವಿಭಾಗದಲ್ಲಿ ಜೇಷ್ಠತೆಯ ಪಟ್ಟಿಯಲ್ಲಿ ಹಿರಿಯರಾಗಿರುವ ಪ್ರೊ. ಖೈಸರ್ ಜಹಾನ್ ಬೇಗಂ ಅವರನ್ನು 01-01-2019ರಿಂದ ಜಾರಿಗೆ ಬಂದಂತೆ 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಭಾಗಾಧ್ಯಕ್ಷರನ್ನಾಗಿ ನೇಮಕ ಮಾಡಲು;<br>ಹಾಗೂ ಮನಃಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರ ನೇಮಕಾತಿಗೆ ಸಂಬಂಧಿಸಿದಂತೆ ವಿಷಯವನ್ನು ಮರುಮಂಡಿಸಲು ತೀರ್ಮಾನಿಸಿತು. |
| 2018/12.5 | ಅಂತರಾಷ್ಟ್ರೀಯ ವಿದ್ಯಾರ್ಥಿಗಳಿಗೆ ವಸತಿ ವ್ಯವಸ್ಥೆಯನ್ನು ಕಲ್ಪಿಸುವ ಸಂಬಂಧ ಕರೆದಿರುವ ಟೆಂಡರ್ ಮೊತ್ತಕ್ಕೆ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ |
| **ತೀರ್ಮಾನ** | ಐ.ಸಿ.ಸಿ.ಆರ್ ನಿಂದ ನಿಯೋಜನೆಗೊಳ್ಳುವ ವಿದ್ಯಾರ್ಥಿಗಳಿಗೆ ವಸತಿ ಸೇವೆಯನ್ನು ಪರವಾನಿಗೆ ಹೊಂದಿರುವ ಸಂಸ್ಥೆಗಳಿಂದ ವಿದೇಶಿ ವಿದ್ಯಾರ್ಥಿಗಳಿಗೆ 03 ವರ್ಷಗಳ ಕಾಲ ವಸತಿ ಸೇವೆಯನ್ನು ಪಡೆಯುವ ಸಲುವಾಗಿ e-procurement ಮೂಲಕ ಟೆಂಡರ್ ಆಹ್ವಾನಿಸಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| | ~~ಕಾಲ ವಸತಿ ಸೇವೆಯನ್ನು ಪಡೆಯುವ ಸಲುವಾಗಿ e-procurement ಮೂಲಕ ಟೆಂಡರ್ ಆಹ್ವಾನಿಸಿರುವುದನ್ನು ಸಿಂಡಿಕೇಟ್ ಅನುಮೋದಿಸಿತು.~~<br>ಹಾಗೆಯೇ ವಿದೇಶಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದಿಂದಲೇ ವಸತಿಸೌಲಭ್ಯ ಕಲ್ಪಿಸಿದಲ್ಲಿ ವಿವಿಧ ದೇಶಗಳ ಹೆಚ್ಚೆಚ್ಚು ವಿದ್ಯಾರ್ಥಿಗಳು ಪ್ರವೇಶ ಪಡೆಯಬಯಸುತ್ತಾರೆ. ಆದ್ದರಿಂದ ಸೂಕ್ತ ಸ್ಥಳದಲ್ಲಿ 200 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲು ಅನುವಾಗುವಂತೆ ತುರ್ತಾಗಿ ವಿದೇಶಿ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯವನ್ನು ಕಟ್ಟಲು ಸಹ ನಿಯಮಾನುಸಾರ ತಕ್ಷಣವೇ ಕ್ರಮಕೈಗೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |
| **2018/12.6** | Retirement of Post-Graduate Teachers during the Calendar Year 2019. |
| Decision | The Syndicate has approved to permit the Post-Graduate Teachers to retire from the University Service who have attained the age of Superannuation. Further, the services of such teachers under clause (3) of the Mysore University Employees(conditions of service) Statutes 1984, if they found physically fit and otherwise suitable, on re-employment basis on contractual basis, till the end of the respective semesters, based on the recommendations of the Department Council. |
| **2018/12.7** | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕಾನೂನು ಸಲಹೆಗಾರರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದಲ್ಲಿ ನ್ಯಾಯಾಲಯದ ಪ್ರಕರಣಗಳು ಹೆಚ್ಚುತ್ತಿದ್ದು, ಸ್ಥಳೀಯ ನ್ಯಾಯಾಲಯ/ಉಚ್ಚ ನ್ಯಾಯಾಲಯ/ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿಗಳಿಗೆ ಕಾನೂನುಬದ್ಧವಾಗಿ ಕಂಡಿಕೆವಾರು ಷರಾವನ್ನು ಪರಿಣಾಮಕಾರಿಯಾಗಿ ಸಿದ್ಧಪಡಿಸಿ ವಿಶ್ವವಿದ್ಯಾನಿಲಯದ ವಕೀಲರುಗಳಿಗೆ ಸಲ್ಲಿಸುವ ಸಲುವಾಗಿ ಹಾಗೂ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳ/ಕಾಲೇಜುಗಳ RTI ಮತ್ತು ಆಡಳಿತಾತ್ಮಕ ವಿಷಯಗಳಿಗೆ ಕಾನೂನು ಸಲಹೆಗಳನ್ನು ಪಡೆಯುವ ಅವಶ್ಯಕತೆಯಿರುವುದರಿಂದ ಒಬ್ಬರು ಸೂಕ್ತ ಕಾನೂನು ಸಲಹೆಗಾರರನ್ನು ನೇಮಕ ಮಾಡಿಕೊಳ್ಳುವ ಹಾಗೂ ಅವರಿಗೆ ಮಾಸಿಕ ಗೌರವ ಸಂಭಾವನೆ ನಿರ್ಧರಿಸುವ ಅಧಿಕಾರವನ್ನು ಸಿಂಡಿಕೇಟ್ ಮಾನ್ಯ ಕುಲಪತಿಗಳಿಗೆ ನೀಡಲು ತೀರ್ಮಾನಿಸಿತು. |
| **2018/12.8** | ದಿವಂಗತ ಶ್ರೀಮತಿ ಪೂವಮ್ಮ, ಸೇವಕಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಗನಾದ ಶ್ರೀ ಮಾರಸ್ವಾಮಿ ಎಂ., ರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ದಿವಂಗತ ಶ್ರೀಮತಿ ಪೂವಮ್ಮ, ಸೇವಕಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ. ಮೈಸೂರು, ಇವರ ಮಗನಾದ ಶ್ರೀ ಮಾರಸ್ವಾಮಿ ಎಂ., ರವರಿಗೆ ಅಧಿನಿಯಮದನುಸಾರ ಅನುಕಂಪದ ಆಧಾರದ ಮೇಲೆ ಸೇವಕ ಹುದ್ದೆಯನ್ನು ನೀಡಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2018/12.9** | ಗಣಕ ವಿಜ್ಞಾನ ಅಧ್ಯಯನ ವಿಭಾಗಕ್ಕೆ ನೂತನ ಅಧ್ಯಕ್ಷರನ್ನು ನೇಮಿಸಿರುವ ಬಗ್ಗೆ ಅನುಸಮರ್ಥನೆಗಾಗಿ |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ, ಗಣಕ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರಾಗಿ ನೇಮಕಗೊಂಡಿದ್ದ ಪ್ರೊ. ಜಿ.ಹೇಮಂತ್ ಕುಮಾರ್, ಪ್ರಾಧ್ಯಾಪಕರು ಇವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ಇವರ ನಂತರ ವಿಭಾಗದಲ್ಲಿ ಜೇಷ್ಠತೆಯ ಪಟ್ಟಿಯಲ್ಲಿ ಹಿರಿಯರಾಗಿರುವ ಡಾ. ಸುರೇಶ, ಪ್ರಾಧ್ಯಾಪಕರು ಇವರನ್ನು ವಿಭಾಗಾಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/12.10** | ಅಧ್ಯಾಪಕೇತರ ಉದ್ಯೋಗಿಗಳು ಈಗಾಗಲೇ ವಿದೇಶಕ್ಕೆ ತೆರಳಲು ಅನುಮತಿ ನೀಡಿರುವ ಬಗ್ಗೆ. |
| **ತೀರ್ಮಾನ** | ಕಾರ್ಯಸೂಚಿಯಲ್ಲಿ ಪ್ರಸ್ತಾಪಿತವಾಗಿರುವಂತೆ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕೇತರ ಉದ್ಯೋಗಿಗಳು ವಿವಿಧ ದಿನಾಂಕಗಳಲ್ಲಿ ವಿದೇಶಕ್ಕೆ ತೆರಳಲು ಅನುಮತಿ ನೀಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/12.11** | ಮೈಸೂರು ವಿಶ್ವವಿದ್ಯಾನಿಲಯದ 124 ತಾತ್ಕಾಲಿಕ ಉದ್ಯೋಗಿಗಳ ವೇತನ ಪಾವತಿ ಮಾಡುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಂದು ವರ್ಷದ ಅವಧಿಗೆ ನೇಮಕಗೊಂಡು ಮತ್ತೊಂದು ವರ್ಷದ ಅವಧಿಗೆ ಮುಂದುವರೆಸಲಾಗಿರುವ 124 ತಾತ್ಕಾಲಿಕ ಉದ್ಯೋಗಿಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದ ಸ್ಪಷ್ಟೀಕರಣವನ್ನು ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿರುವುದನ್ನು ಗಮನಿಸಿದ ಸಿಂಡಿಕೇಟ್ ಈಗಾಗಲೇ ಸದರಿ ಉದ್ಯೋಗಿಗಳು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸಿರುವುದರಿಂದ ತಡೆಹಿಡಿಯಲಾಗಿರುವ ವೇತನವನ್ನು ಬಿಡುಗಡೆಗೊಳಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/12.12** | Retirement of Constituent College Teachers during the Calendar Year 2019 |
| **ತೀರ್ಮಾನ** | The Syndicate has approved to permit the Constituent College Teacher to retire from the University Service who have attained the age of Superannuation. Further, the services of such teachers under clause (3) of the Mysore University Employees (conditions of service) Statutes 1984, if they found physically fit and otherwise suitable, on re-employment basis on contractual basis, till the end of the respective semesters. |
| **2018/12.13** | ಯುಪಿಇ (ಸಾಮರ್ಥ್ಯವರ್ಧಿತ ಉತ್ಕೃಷ್ಟತಾ ವಿಶ್ವವಿದ್ಯಾನಿಲಯ) ಮತ್ತು ಸಿಪಿಇಪಿಎ ಯೋಜನೆಯ ತಾಂತ್ರಿಕ ಮತ್ತು ತಾಂತ್ರಿಕೇತರ ಸಿಬ್ಬಂದಿ ವರ್ಗದವರನ್ನು ಮುಂದುವರೆಸುವ ಬಗೆಗೆ. |
| **ತೀರ್ಮಾನ** | ಮುಂದಿನ ವರ್ಷದಲ್ಲಿ NAAC ತಂಡವು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುತಲಿದ್ದು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಸುಮಾರು 10 ರಿಂದ 15 ಕೋಟಿಯಷ್ಟು ಬೆಲೆಬಾಳುವ ಉಪಕರಣಗಳಿರುವುದರಿಂದ ಇವುಗಳ ನಿರ್ವಹಣೆಗಾಗಿ ಇಲ್ಲಿ |

| | |
|---|---|
| | ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಮತ್ತು ತಾಂತ್ರಿಕೇತರ ವರ್ಗದವರನ್ನು ಯೋಜನಾ ಅವಧಿ 31-12-2018ಕ್ಕೆ ಮುಗಿದರೂ ಮತ್ತೊಂದು ವರ್ಷದ ಅವಧಿಗೆ ಮುಂದುವರೆಸುವ ಸಲುವಾಗಿ ಸಮಿತಿಯೊಂದನ್ನು ರಚಿಸಿ ವರದಿಯನ್ನು ಪಡೆದು ಮುಂದಿನ ಸಿಂಡಿಕೇಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳಲು ಹಾಗೂ ಸಮಿತಿ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/12.14** | ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ, ಇಲ್ಲಿನ ಕನ್ನಡ, ಗಣಿತಶಾಸ್ತ್ರ ಹಾಗೂ ರಾಜ್ಯಶಾಸ್ತ್ರ ವಿಭಾಗಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವಂತೆ ಕೋರಿರುವ ಬಗ್ಗೆ. |
| **ತೀರ್ಮಾನ** | ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇಲ್ಲಿ ಯಾವುದೇ ಖಾಯಂ ಬೋಧಕರು ಇಲ್ಲದಿರುವುದರಿಂದ ಯುಜಿಸಿ ನಿಯಮದ ಪ್ರಕಾರ ಎರಡು ವರ್ಷಗಳು ಹಾಗೂ ಹೆಚ್ಚಿನ ಅವಧಿಗೆ ಸೇವೆ ಸಲ್ಲಿಸಿದ್ದರೂ ವಿಶೇಷ ಸಂದರ್ಭವೆಂದು ಪರಿಗಣಿಸಿ 2018-19ನೇ ಸಾಲಿನಲ್ಲಿ ದಿನಾಂಕ 6-8-2018ರಿಂದ ಜಾರಿಗೆ ಬಂದಂತೆ ಸಂದರ್ಶಕ ಪ್ರಾಧ್ಯಾಪಕರುಗಳಾಗಿ ಆಹ್ವಾನಿಸುವಂತೆ ಕೋರಿರುವ ಕೇಂದ್ರದ ನಿರ್ದೇಶಕರ ಮನವಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/12.15** | 2018-19ನೇ ಶೈಕ್ಷಣಿಕ ಸಾಲಿನಲ್ಲಿ ಎನ್.ಎಸ್.ಎಸ್/ಎನ್.ಸಿ.ಸಿ/ಕ್ರೀಡೆ ಮತ್ತು ಇತರೆ ವಿಶೇಷ ಕೋಟದ ಅಡಿಯಲ್ಲಿ ಸೀಟುಗಳನ್ನು ಹಂಚಲು ಕಾರ್ಯನಿರ್ವಹಿಸಿದ ಸಿಬ್ಬಂದಿ ವರ್ಗದವರಿಗೆ ಗೌರವಧನ ನೀಡಿರುವ ಬಗ್ಗೆ. |
| **ತೀರ್ಮಾನ** | 2018-19ನೇ ಶೈಕ್ಷಣಿಕ ಸಾಲಿನಲ್ಲಿ ಎನ್.ಎಸ್.ಎಸ್/ಎನ್.ಸಿ.ಸಿ/ಕ್ರೀಡೆ ಮತ್ತು ಇತರೆ ವಿಶೇಷ ಕೋಟದ ಅಡಿಯಲ್ಲಿ ಸೀಟುಗಳನ್ನು ಹಂಚಲು ಕಛೇರಿ ವೇಳೆಗೆ ಮಿಗಿಲಾಗಿ ಹಾಗೂ ರಜೆ ದಿನಗಳಂದು ಕಾರ್ಯನಿರ್ವಹಿಸಿದ ಸಿಬ್ಬಂದಿ ವರ್ಗದವರಿಗೆ ಗೌರವಧನ ನೀಡಲು ಸಿಂಡಿಕೇಟ್ ಅನುಮೋದಿಸಿತು. |
| **2018/12.16** | ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ International School of Information Management ಕೇಂದ್ರದ ಕಾರ್ಯವೈಖರಿ ಬಗೆಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ 2003-15ರ ಅವಧಿಯಲ್ಲಿ ಕಾರ್ಯನಿರ್ವಹಿಸಿದ್ದ International School of Information Management ಕೇಂದ್ರದ ಕಟ್ಟಡವನ್ನು ಬ್ಯಾಂಕ್‌ಗೆ ನೀಡಬೇಕಾಗಿರುವ ಸಾಲವನ್ನು ತೀರಿಸಿ ಸವಿಶ್ವವಿದ್ಯಾನಿಲಯದ ಸುಪರ್ದಿಗೆ ತೆಗೆದುಕೊಂಡು Innovative Centre or Information Centre ನ ಶೈಕ್ಷಣಿಕ ಉದ್ದೇಶಗಳಿಗೆ ಬಳಸಿಕೊಳ್ಳಬಹುದಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ಈ ಕಟ್ಟಡವನ್ನು ಸುಪರ್ದಿಗೆ ತೆಗೆದುಕೊಳ್ಳಲು ಸಕಾರಾತ್ಮಕವಾಗಿ ಚಿಂತಿಸಿ ಸೂಕ್ತ ಸಲಹೆಗಳನ್ನು ನೀಡಲು ಕೋರಿದರು. |
| **ತೀರ್ಮಾನ** | ಸುದೀರ್ಘ ಚರ್ಚೆಯ ನಂತರ Ford Foundation ವತಿಯಿಂದ ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿ ಹೊಸ ಕಟ್ಟಡದೊಂದಿಗೆ ಸ್ಥಾಪಿಸಿ 2003-15ರ ಅವಧಿಯಲ್ಲಿ ಕಾರ್ಯನಿರ್ವಹಿಸಿದ್ದ International School of Information Management ಕೇಂದ್ರದ ಕಟ್ಟಡವನ್ನು ವಿಶ್ವವಿದ್ಯಾನಿಲಯದ ಸುಪರ್ದಿಗೆ ತೆಗೆದುಕೊಳ್ಳಬೇಕಾಗಿರುವುದರಿಂದ ಅದರ ಹೊಣೆಗಾರಿಕೆ(Liabilities) ಅಂದರೆ ಬ್ಯಾಂಕ್‌ನಿಂದ ಪಡೆದಿರುವ ಬಾಕಿ ಸಾಲವನ್ನು ತೀರಿಸಬೇಕಾಗಿದ್ದು ಹಣಕಾಸು ಸಮಿತಿಯ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯದ ಯಾವುದಾದರೂ ಒಂದು |

| | |
|---|---|
| | ಶೀರ್ಷಿಕೆಯಿಂದ ಭರಿಸಲು ತೀರ್ಮಾನಿಸಿತು. ಮುಂದುವರೆದು, ಅದಕ್ಕೂ ಮುಂಚಿತವಾಗಿ ಮಾನ್ಯ ಕುಲಪತಿಗಳು ಅಥವಾ ಅವರು ಸೂಚಿಸುವ ಅಧಿಕಾರಿಯ ನೇತೃತ್ವದ ತಂಡದೊಡನೆ ಸಂಬಂಧಪಟ್ಟ ಬ್ಯಾಂಕ್ ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚಿಸಿ ಇದೊಂದು ವಿದ್ಯಾಸಂಸ್ಥೆಯಾಗಿರುವುದರಿಂದ ಬಡ್ಡಿಯ ಹಣವನ್ನು ಮನ್ನಾ ಮಾಡುವಂತೆ ಕೋರಲು ತೀರ್ಮಾನಿಸಲಾಯಿತು. |
| **2018/12.17** | ಪ್ರೊ. ಮಹೇಶ್ ಚಂದ್ರ ಗುರು, ಅಧ್ಯಕ್ಷರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ದಿನಾಂಕ 07.09.2018 ರಂದು ಶುಕ್ರವಾರ ಆಂದೋಲನ ದಿನಪತ್ರಿಕೆಯಲ್ಲಿ "ಮುಂದುವರಿದ ಮೈಸೂರು ವಿವಿ ಸ್ವಚ್ಚತಾ ನೌಕರರ ಹೋರಾಟ" ಎಂದು ಶೀರ್ಷಿಕೆ ಅಡಿಯಲ್ಲಿ ಪ್ರಕಟವಾಗಿರುವ ವರದಿಯಲ್ಲಿ ನೀಡಿರುವ ಹೇಳಿಕೆಯ ಬಗ್ಗೆ. |
| **ತೀರ್ಮಾನ** | ಪ್ರೊ. ಮಹೇಶ್ ಚಂದ್ರ ಗುರು, ಅಧ್ಯಕ್ಷರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಕುರಿತು ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ನಂತರ ತೀರ್ಮಾನ ತೆಗೆದುಕೊಳ್ಳುವ ಕಾರಣದಿಂದಾಗಿ ವಿಷಯವನ್ನು ಮುಂದೂಡಲಾಯಿತು. |
| **2018/12.18** | ಶ್ರೀ ಜಿ. ಹನುಮಂತಪ್ಪ, ದ್ವಿತೀಯ ದರ್ಜೆ ಗುಮಾಸ್ತರು, ಆಡಳಿತ ಶಾಖೆ (ಸೇವೆಯಿಂದ ವಜಾಗೊಂಡವರು) ಇವರಿಗೆ ಪೂರ್ಣ ಪ್ರಮಾಣದ ಪಿಂಚಣಿ ನೀಡುವ ಬಗ್ಗೆ. |
| **ತೀರ್ಮಾನ** | ಶ್ರೀ ಜಿ. ಹನುಮಂತಪ್ಪ, ದ್ವಿತೀಯ ದರ್ಜೆ ಗುಮಾಸ್ತರು, ಆಡಳಿತ ಶಾಖೆ (ಸೇವೆಯಿಂದ ವಜಾಗೊಂಡವರು) ಇವರು ಇದೇ ಪ್ರಕರಣದಲ್ಲಿ ಭಾಗಿಯಾಗಿರುವ ಶ್ರೀ ಎಲ್.ಕೆ.ಮಂಜುನಾಥಸ್ವಾಮಿಯವರಿಗೆ ನೀಡಿರುವಂತೆ ನನಗೂ ಸಹ ಸಂಪೂರ್ಣ ಪಿಂಚಣಿ ಸೌಲಭ್ಯವನ್ನು ನೀಡುವಂತೆ ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿದ ಸಿಂಡಿಕೇಟ್ ಇಬ್ಬರ ಪ್ರಕರಣಗಳು ಒಂದೇ ಆಗಿರುವುದರಿಂದ ಸಮಾನ ನ್ಯಾಯ ಒದಗಿಸುವ ದೃಷ್ಟಿಯಿಂದ ಶ್ರೀ ಎಲ್.ಕೆ.ಮಂಜುನಾಥಸ್ವಾಮಿಯವರಿಗೆ ನೀಡಿರುವಂತೆ ಇವರಿಗೂ ಸಹ ಪೂರ್ಣ ಪಿಂಚಣಿಯನ್ನು ನಿಯಮಾನುಸಾರ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/12.19** | ಡಾ. ಅನಂತ ನಾಗೇಂದ್ರ ಭಟ್ ರವರಿಗೆ ಯುಜಿಸಿ-ಸಿಎಎಸ್ ಅಡಿಯಲ್ಲಿ ಸಹಾಯಕ ಪ್ರಾಧ್ಯಾಪಕ ಎ.ಜಿ.ಪಿ 7000 ರಿಂದ 8000 ಹಂತಕ್ಕೆ ಪದೋನ್ನತಿ ನೀಡುವ ಬಗ್ಗೆ. |
| **ತೀರ್ಮಾನ** | ಡಾ. ಅನಂತ ನಾಗೇಂದ್ರ ಭಟ್ ರವರಿಗೆ ಯುಜಿಸಿ-ಸಿಎಎಸ್ ಅಡಿಯಲ್ಲಿ ಸಹಾಯಕ ಪ್ರಾಧ್ಯಾಪಕ ಎ.ಜಿ.ಪಿ 7000 ರಿಂದ 8000 ಹಂತಕ್ಕೆ ನಿಯಮಾನುಸಾರ ಅವರ ಅರ್ಹತಾ ದಿನಾಂಕದಿಂದ ಜಾರಿಗೆ ಬರುವಂತೆ ಪದೋನ್ನತಿ ನೀಡಲು ತೀರ್ಮಾನಿಸಿತು. |
| **2018/12.20** | ಕುಕ್ಕರಹಳ್ಳಿ ಕೆರೆಯ ಮೀನು ಪಾಶುವಾರು ಗುತ್ತಿಗೆಯನ್ನು ಮುಂದುವರಿಸುವ ಬಗ್ಗೆ |
| **ತೀರ್ಮಾನ** | ಮೊದಲಿಗೆ ಸಂಬಂಧಪಟ್ಟವರಿಗೆ ನೋಟಿಸು ಜಾರಿಮಾಡಿ ಅವರಿಂದ ಉತ್ತರ ಪಡೆದ ನಂತರ ಮುಂಬರುವ ಸಿಂಡಿಕೇಟ್‌ಗೆ ಮರುಮಂಡಿಸಲು ತೀರ್ಮಾನಿಸಿತು. |
| **2018/12.21** | 99ನೇ ವಾರ್ಷಿಕ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಕೆ.ಟಿ.ಪಿ.ಪಿ.ಯ ಅನ್ವಯ ಟೆಂಡರ್ ಆಹ್ವಾನಿಸುವ ಬಗ್ಗೆ |
| **ತೀರ್ಮಾನ** | 99ನೇ ವಾರ್ಷಿಕ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಕೆ.ಟಿ.ಪಿ.ಪಿ.ಯ ಅನ್ವಯ ಟೆಂಡರ್ ಆಹ್ವಾನಿಸಲು ಸಿಂಡಿಕೇಟ್ ಅನುಮೋದಿಸಿತು. |

| 2018/12.22 | ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗಕ್ಕೆ ಅವಶ್ಯಕವಿರುವ ಸಾವಯವ ಗೊಬ್ಬರ, ಹೂವಿನ ಬೀಜಗಳು, ಇತ್ಯಾದಿಗಳನ್ನು ಖರೀದಿಸುವ ಬಗ್ಗೆ |
|---|---|
| ತೀರ್ಮಾನ | ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗಕ್ಕೆ ಅವಶ್ಯಕವಿರುವ ಸಾವಯವ ಗೊಬ್ಬರ, ಹೂವಿನ ಬೀಜಗಳು, ನರ್ಸರಿ ಪರಿಕರಗಳು, ಉದ್ಯಾನವನಗಳ ನಿರ್ಮಾಣ, ನಿರ್ವಹಣೆ ಇತ್ಯಾದಿಗಳಿಗಾಗಿ 20.00 ಲಕ್ಷಗಳ ಮೊತ್ತಕ್ಕೆ ನಿಗಧಿಗೊಳಿಸಿ ಇತರೆ ಸಂಪನ್ಮೂಲಗಳಿಂದ ಯಾವುದಾದರೂ ಹಣ ಕ್ರೋಢೀಕೃತವಾದಲ್ಲಿ 2018-19ನೇ ಸಾಲಿನಲ್ಲಿ ಲಭ್ಯವಾಗುವಷ್ಟು ಮೊತ್ತಕ್ಕೆ ಮಂಜೂರಾತಿ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |

**ಇತರೆ ವಿಷಯಗಳು:**

1. ವಿಶ್ವವಿದ್ಯಾನಿಲಯದ ಅಧ್ಯಾಪಕರಿಗೆ ಸಿಎಎಸ್ ಪದೋನ್ನತಿಯ ಸೌಲಭ್ಯವನ್ನು ವಿಸ್ತರಿಸುವ ಸಂಬಂಧ ಇದುವರೆಗೂ ಪದೋನ್ನತಿಗೆ ಅರ್ಹರಾದ ಅಧ್ಯಾಪಕರುಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆ ಹೊರಡಿಸಲಾಗುತ್ತಿತ್ತು. ಇದಕ್ಕೆದುರಾಗಿ ಅರ್ಜಿ ಸಲ್ಲಿಸಿದ ಅಧ್ಯಾಪಕರುಗಳ ಅರ್ಜಿಗಳನ್ನು ಸಿಎಎಸ್ ಪದೋನ್ನತಿ ಪ್ರಕ್ರಿಯೆಗೆ ಪರಿಗಣಿಸಲಾಗುತ್ತಿರುವುದನ್ನು ಇನ್ನೂ ಮುಂದೆ ಸ್ಥಗಿತಗೊಳಿಸಿ ಯು.ಜಿ.ಸಿ. ನಿಯಮಾನುಸಾರ ರಚಿಸಲಾಗಿದ್ದ ಅಧಿನಿಯಮ ಕುಲಾಧಿಪತಿಗಳಿಂದ ಅನುಮೋದನೆಗೊಂಡಿದ್ದು ಅದರಂತೆ ಅರ್ಹ ಅಭ್ಯರ್ಥಿಗಳು ಯುಕ್ತ ಮಾರ್ಗದ ಮೂಲಕ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅಧ್ಯಾಪಕರಿಗೆ ಪದೋನ್ನತಿಯ ಪ್ರಕ್ರಿಯೆಗಳನ್ನು ಆರು ತಿಂಗಳು ಅಥವಾ ಗರಿಷ್ಠ ಒಂದು ವರ್ಷವನ್ನು ಮೀರದಂತೆ ಪೂರ್ಣಗೊಳಿಸಲು ಸಿಂಡಿಕೇಟ್ ತೀರ್ಮಾನಿಸಿತು.

2. ಮಾನ್ಯ ಕುಲಪತಿಗಳು ಮಾತನಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರನ್ನು ಭೇಟಿ ಮಾಡಿದಂತಹ ಸಂದರ್ಭದಲ್ಲಿ ಅವರೊಡನೆ ಚರ್ಚಿಸಿದಂತೆ 100 ವರ್ಷಗಳಷ್ಟು ಹಳೆಯದಾದ ಮತ್ತು ತನ್ನದೇ ಆದ ಇತಿಹಾಸ, ಹಿರಿಮೆಯನ್ನು ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯವನ್ನು ರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವುದು ಮತ್ತು ಆ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಪ್ರಯತ್ನಿಸುವುದು ರಾಜ್ಯ ಸರ್ಕಾರದ ಗುರಿಯಾಗಿದೆ. ಆದ್ದರಿಂದ ಈ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯವು ಕಾರ್ಯೋನ್ಮುಖವಾಗಬೇಕು. ಸರ್ಕಾರವು ಸಹ ಸಾಧ್ಯವಾದಷ್ಟುಮಟ್ಟಿಗೆ ಸಹಕಾರ ನೀಡಲಿದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಶೈಕ್ಷಣಿಕ ಅಭಿವೃದ್ಧಿಯನ್ನು ಸಾಧಿಸುವ ನಿಟ್ಟಿನಲ್ಲಿ ಪ್ರಸ್ತುತ ಸನ್ನಿವೇಶಕ್ಕೆ ಅಗತ್ಯವಿರುವಂತಹ ಹೊಸ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸುವುದರೊಂದಿಗೆ ಸಂಶೋಧನೆಗೆ ಹೆಚ್ಚು ಪ್ರಾಮುಖ್ಯತೆ ನೀಡಿ ಗುಣಮಟ್ಟದ ಶಿಕ್ಷಣ ನೀಡಲು ಪ್ರಯತ್ನಿಸಬೇಕಿದೆ. ಈ ಸಂಬಂಧ ಅವಶ್ಯ ಸಮಿತಿಗಳನ್ನು ರಚಿಸಬೇಕಾಗುತ್ತದೆ. ಇದರ ಸಲುವಾಗಿ ಆದಷ್ಟು ಬೇಗನೇ ರಾಜ್ಯಸರ್ಕಾರದ ಅನುದಾನ ಕೋರಿ 15 ದಿವಸಗಳೊಳಗೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದೆಯೆಂದು ಸಿಂಡಿಕೇಟ್‌ನ ಅನುಮೋದನೆ ಕೋರಿದರು.

**ವಿಶ್ವವಿದ್ಯಾನಿಲಯದ ಒಟ್ಟಾರೆ ಶೈಕ್ಷಣಿಕ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದ ಅನುದಾನ ಕೋರುವ ಸಲುವಾಗಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಸಿಂಡಿಕೇಟ್ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ತೀರ್ಮಾನಿಸಿತು.**

3. ಕಳೆದ 12 ವರ್ಷಗಳಿಂದ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ನೇಮಕಾತಿಗಳಿಲ್ಲದೇ ಇರುವುದನ್ನು ಗಮನಿಸಿದ ಸಿಂಡಿಕೇಟ್ ಆದಷ್ಟು ಬೇಗನೇ ಸಿಎಎಸ್ ಅಡಿಯಲ್ಲಿ ಅಧ್ಯಾಪಕರಿಗೆ ಪದೋನ್ನತಿ ನೀಡಲು ಹಾಗೂ ನ್ಯಾಯೋಚಿತವಾಗಿ ಕ್ರಮಬದ್ಧವಾಗಿ ನೇರ ನೇಮಕಾತಿಗಳನ್ನು ಮಾಡಲು ಅಗತ್ಯಕ್ರಮವಹಿಸಬೇಕಾಗಿದೆಯೆಂದು ತೀರ್ಮಾನಿಸಿತು. ನೇರ ನೇಮಕಾತಿ ಪ್ರಕ್ರಿಯೆಯು ಕಾರಣಾಂತರದಿಂದ ವಿಳಂಬವಾದಲ್ಲಿ ಶೈಕ್ಷಣಿಕ ಗುಣಮಟ್ಟ ಕುಸಿಯದಿರುವ ಉದ್ದೇಶದಿಂದ ಪ್ರತಿ ವಿಭಾಗಕ್ಕೂ ಪೂರ್ಣಾವಧಿಯಲ್ಲಿ ಸ್ನಾತಕೋತ್ತರ ವಿಭಾಗಗಳಲ್ಲಿ ಬೋಧಿಸಲು ಒಬ್ಬರು ಅಥವಾ ಇಬ್ಬರಂತೆ ಒಟ್ಟು 50 ಹಿರಿಯ ನಿವೃತ್ತ ಪ್ರಾಧ್ಯಾಪಕರನ್ನು ವಿಶೇಷ ಸಂದರ್ಭವೆಂದು ಪರಿಗಣಿಸಿ ನೇಮಕ ಮಾಡಿಕೊಳ್ಳಲು ಸಹ ತೀರ್ಮಾನಿಸಿತು.

4. ಡಾ. ರಾಜಗೋಪಾಲ್ ಅವರು ಮಾತನಾಡಿ 2019-20ನೇ ಸಾಲಿನಿಂದಲೇ ಹೊಸದಾಗಿ ನಾಲ್ಕು ವರ್ಷಗಳ ಇಂಟಿಗ್ರೇಟೆಡ್ ಬಿ.ಎಡ್ ಕೋರ್ಸ್‌ಗಳನ್ನು ಪ್ರಾರಂಭಿಸುವ ಸಂಬಂಧ ಎನ್.ಸಿ.ಟಿ.ಇ. ಸಂಸ್ಥೆಯು ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಈ ಅರ್ಜಿಗಳನ್ನು ಸಲ್ಲಿಸಲು ಬಿ.ಎ., ಬಿ.ಎಸ್‌ಸಿ ಹೊಂದಿರುವ ಬಿ.ಎಡ್ ಕಾಲೇಜುಗಳು ಅಥವಾ ಉನ್ನತ ಶಿಕ್ಷಣವನ್ನು ಅಂದರೆ ಎಂ.ಎಸ್ಸಿ ಎಂ.ಎ ಅಥವಾ ಡಿಪ್ಲೋಮಾ ಇನ್ ಎಜುಕೇಷನ್ ಬೋಧಿಸುವ ಸಂಸ್ಥೆಗಳು ಸಲ್ಲಿಸಬೇಕಾಗುತ್ತದೆಂಬ ಅಂಶಗಳೊಡನೆ ವಿವರಿಸುತ್ತಾ ಇಂತಹ ಕಾಲೇಜುಗಳು ಇಂಟಿಗ್ರೇಟೆಡ್ ಬಿ.ಎಡ್ ಕೋರ್ಸ್‌ಗಳನ್ನು ಪ್ರಾರಂಭಿಸುವ ಸಲುವಾಗಿ ಅರ್ಜಿಸಲ್ಲಿಸಲು ಕೊನೆಯ ದಿನಾಂಕ 31-12-2018 ಆಗಿರುವುದರಿಂದ ಅವಶ್ಯಕವಾಗಿ ವಿಶ್ವವಿದ್ಯಾನಿಲಯದಿಂದ ಬೇಕಾಗಿರುವ ಬೇಬಾಕಿ ಪತ್ರವನ್ನು ತುರ್ತಾಗಿ ನೀಡಲು ಸೂಕ್ತ ನಿರ್ದೇಶನ ನೀಡಬೇಕೆಂದು ಕೋರಿದರು.

ನಾಲ್ಕು ವರ್ಷಗಳ ಇಂಟಿಗ್ರೇಟೆಡ್ ಬಿ.ಎಡ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಕಾಲೇಜುಗಳಿಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ಶುಲ್ಕ ಪಡೆದು ಬೇಬಾಕಿ ಪತ್ರವನ್ನು ನೀಡಲು ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಿಲ್ಲದ ಕಾಲೇಜುಗಳು ಕೋರ್ಸುಗಳನ್ನು ಪ್ರಾರಂಭಿಸುವ ಮುಂಚಿತವಾಗಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಳ್ಳುವುದಾಗಿ ಸೂಕ್ತ ಮುಚ್ಚಳಿಕೆ ನೀಡಿದಲ್ಲಿ ಅಂತಹವರಿಗೂ ಬೇಬಾಕಿ ಪತ್ರವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು.

5. ನಾಲ್ಕು ವರ್ಷಗಳ ಇಂಟಿಗ್ರೇಟೆಡ್ ಬಿ.ಎಡ್ ಕೋರ್ಸ್‌ಗಳನ್ನು ಪ್ರಾರಂಭಿಸಬೇಕಾಗಿರುವುದರಿಂದ ಅಧ್ಯಯನ ಮಂಡಳಿಯಲ್ಲಿ ಆಡಳಿತಾತ್ಮಕ ವಿಷಯಗಳನ್ನು ಚರ್ಚಿಸಬೇಕಾಗಿರುತ್ತದೆ. ಆದ್ದರಿಂದ ಇಬ್ಬರು ಹಿರಿಯ ಪ್ರಾಂಶುಪಾಲರುಗಳನ್ನು ಪೂರ್ಣಾವಧಿಗೆ ವಿಶೇಷ ಪರಿಣಿತರಾಗಿ ನಾಮನಿರ್ದೇಶನವನ್ನು ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ಸಿಂಡಿಕೇಟ್ ಸರ್ವಾನುಮತದಿಂದ ನೀಡಿತು.

6. ಅನುದಾನಿತ ಮತ್ತು ಅನುದಾನರಹಿತ ಬಿ.ಎಡ್.ಕಾಲೇಜುಗಳ ಅಧ್ಯಾಪಕರ ಪ್ರತ್ಯೇಕ ಜೇಷ್ಠತಾಪಟ್ಟಿಯನ್ನು ರಚಿಸುವ ಬಗ್ಗೆ ಮಾಹಿತಿಯಿದ್ದು ವಿಶ್ವವಿದ್ಯಾನಿಲಯವು ಈ ಬಗ್ಗೆ ಕ್ರಮಕೈಗೊಳ್ಳಬಾರದೆಂದು ತೀರ್ಮಾನಿಸಬೇಕಾಗಿ ಡಾ. ರಾಜಗೋಪಾಲ್ ಅವರು ಕೋರಿದರು. ಮಾನ್ಯ ಕುಲಸಚಿವ(ಪರೀಕ್ಷಾಂಗ) ಅವರು ಜೇಷ್ಠತಾಪಟ್ಟಿಯಲ್ಲಿ ಹಲವಾರು ಅರ್ಹ ಅಧ್ಯಾಪಕರುಗಳ ಹೆಸರುಗಳನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟು ಕಳುಹಿಸುತ್ತಿದ್ದು ಇದರಿಂದ ಶೈಕ್ಷಣಿಕವಾಗಿ ನ್ಯಾಯ ದೊರಕಿಸಲು ಸಾಧ್ಯವಾಗುತ್ತಿಲ್ಲವೆಂದು ವಿವರಿಸಿ ಆದಾಗ್ಯೂ ಯಥಾಸ್ಥಿತಿಯನ್ನು ಕಾಪಾಡುವುದಾಗಿ ತಿಳಿಸಿದರು.

ಬಿ.ಎಡ್. ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುವ ಅಧ್ಯಾಪಕರು/ಪ್ರಾಂಶುಪಾಲರ ಜೇಷ್ಠತಾಪಟ್ಟಿಯನ್ನು ತಮ್ಮ ಕಾಲೇಜಿನ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸಬೇಕು. ಮತ್ತು ಎಲ್ಲಾ ಬಿ.ಎಡ್. ಕಾಲೇಜುಗಳ ಅಧ್ಯಾಪಕರ ಜೇಷ್ಠತಾಪಟ್ಟಿಯನ್ನು ಕಳುಹಿಸಲು ಹಾಗೂ ಉದ್ದೇಶಪೂರ್ವಕವಾಗಿ ಕೈಬಿಡಲಾಗುವ ಅಧ್ಯಾಪಕರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಬಗ್ಗೆ ಸುತ್ತೋಲೆಯನ್ನು ಹೊರಡಿಸಲು ಸಿಂಡಿಕೇಟ್ ತೀರ್ಮಾನಿಸಿತು.

7. ಈಗಾಗಲೇ ಕಳೆದ ಸಿಂಡಿಕೇಟ್‌ನಲ್ಲಿ ಸಮಿತಿ ರಚಿಸಿ ಅನಿರೀಕ್ಷಿತ ಭೇಟಿ ನೀಡಲು ತೀರ್ಮಾನಿಸಿದ್ದು ಈ ದಿಸೆಯಲ್ಲಿ ಕಾರ್ಯೋನ್ಮುಖವಾಗಲು ಸಮಿತಿ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಿ ಆಗಾಗ್ಗೆ ಅನಿರೀಕ್ಷಿತ ಭೇಟಿ ನೀಡಿ ಬಿ.ಎಡ್. ಕಾಲೇಜುಗಳ ಕಾರ್ಯವೈಖರಿಯನ್ನು ಪರಿಶೀಲಿಸಿ ಗುಣಮಟ್ಟ ಶಿಕ್ಷಣವನ್ನು ನೀಡಲು ಅಗತ್ಯ ಕ್ರಮಕೈಗೊಳ್ಳಲು ಸಹ ಸಿಂಡಿಕೇಟ್ ತೀರ್ಮಾನಿಸಿತು.

ಕೊನೆಯಲ್ಲಿ ಏಳನೇ ಸಾಮಾನ್ಯ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಲಹೆ ಸಹಕಾರಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಪತಿಗಳು ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Rajkumar 10/12/18.

**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ** **ಕುಲಪತಿ ಮತ್ತು ಅಧ್ಯಕ್ಷರು**